

ಅಂತ ನಕ್ಕರು. 'ಸ್ವಾಮಿ, ನೀವಿಲ್ವೇ? ನಿಮ್ಮ ತಂದೆತಾಯಿ, ನನ್ನ ತಂದೆತಾಯಿ ಎಲ್ರೂ ಇದೇ ಕುಗ್ರಾಮದಲಿದ್ರು. ಹಾಗೇ ನಾವೂ ಇದ್ರಾಯ್ತು ಬಿಡಿ' ಅಂದ್ರು. ಮೇಷ್ಟ್ರು ಮುಂದುವರೆದು 'ಅದ್ಸರಿ ಚೇರ್ಮನ್ರೇ! ನಾನು ನನ್ನ ಸರ್ವೀಸ್‌ನಲ್ಲಿ ಹತ್ತಾರು ಊರುಗಳ್ನ ನೋಡಿದೀನಿ. ಆದ್ರೆ, ಯಾವ ಊರೂ ನಮ್ಮೂರ ಥರಾ ಇಲ್ಲಾ ನೋಡಿ. ಇಡೀ ಊರು ಗಬ್ಬು ನಾರ್ತಿದೆ. ಅದ್ಯಾಕೆ ಹೀಗೆ?' ಅಂದ್ರು.

ಚೇರ್ಮನ್ನರ ಮುಖಮಂಡಲ ಗಂಟಿಕ್ಕಿತು. ಒಂದೇ ಕ್ಷಣದಲ್ಲಿ ಗಂಟು ಸಡಿಲಾಗಿ ನಸುನಗೆ ಹೊಮ್ಮಿತು. 'ನೋಡಿ ಮೇಷ್ಟ್ರೇ! ನೀವು ಈ ಊರಿನವರೇ ಇರಬಹುದು. ಆದ್ರೆ, ಈ ವಾತಾವರಣಕ್ಕೆ ಹೊಸಬ್ರು. ಈ ಜನ್ರನ್ನ ನೀವಲ್ಲ; ಸ್ವತಃ ಬ್ರಹ್ಮನೇ ಬಂದ್ರೂ ಸುಧಾರ್ಸೋಕಾಗೋಲ್ಲ. ನನ್ನ ನಂಬಿ.' ಅಂದ್ರು. 'ಅಲ್ಲ, ಸ್ವಾಮಿ ! ನೀವು ತಿಳಿದೋರು. ನೀವು ಹೀಗೆ ಹೇಳಿದ್ರೆ ಹ್ಯಾಗೆ? ನೀವೇ ತಿಳಿಹೇಳಬಹುದಲ್ವಾ?' ಅಂತ ಮೇಷ್ಟ್ರಂದ್ರೆ, ಚೇರ್ಮನ್ರು ಗಹಗಹಿಸಿ ನಗುತ್ತ, 'ತಿಳಿಹೇಳೋಕೆ ನಾನೇನು ಮೇಷ್ಟ್ರಾ? ಈಗ ನೀವು ಹೇಗೂ ಬಂದಿದೀರಲ್ವಾ? ನೀವೇ ಪಾಠಾ ಮಾಡಿ ನೋಡಿ' ಅಂದರು. ಅವರ ನಗೆ ಮುಂದುವರೆಯಿತು. ಮತ್ತೆ ಗಂಭೀರವದನರಾಗಿ 'ಆಯ್ತು, ಮೇಷ್ಟ್ರೇ! ಪುರುಸೊತ್ತಾದಾಗ ನಮ್ಮನೆಗೆ ಬನ್ನಿ; ಮಾತಾಡಣ' ಅಂತ ಸಾಗಹಾಕಿದರು.

ಮಾರನೆಯ ದಿನ ಮೇಷ್ಟ್ರು ಶಾಲೆಯತ್ತ ನಡೆದರು. ಅದೊಂದು ಪೂರ್ಣ ಪ್ರಾಥಮಿಕ ಶಾಲೆ. ಶಾಲೆಯ ಗಡಿಗಳನ್ನು ಬೇಲಿ ಆವರಿಸಿತ್ತು. ಅಲ್ಲಲ್ಲಿ ದನಗಳು ನುಗ್ಗಿ ಬೇಲಿ ಬಾಯ್ತೆರೆದುಕೊಂಡಿತ್ತು. ಬಹುಶಃ ಮಳೆಗಾಲದ ಹಸಿರಿಗೆ ದನ ನುಗ್ಗಿರಬೇಕು. ಶಾಲೆಯ ಆವರಣವನ್ನು ಪ್ರವೇಶಿಸಿ ಮುಖ್ಯಾಧ್ಯಾಪಕರನ್ನು ಮಾತನಾಡಿಸಿದರು. 'ನೀವು ಹೇಳೋದೇನೋ ಸರಿ, ಮೇಷ್ಟ್ರೇ! ಇಲ್ಲಿ ನಾವು ಮನೆ ಮಾಡಾಣ ಅಂದ್ರೆ ವಾಸಕ್ಕೆ ಮನೆಯೇ ಇಲ್ಲ. ಬೆಳಿಗ್ಗೆ ಬಂದ್ರೆ ಸಾಯಂಕಾಲ ಊರು ಬಿಡ್ಲೇಬೇಕು. ಬೇಲಿ ಸರಿಪಡಿಸೋದಕ್ಕೆ, ಶಾಲೆಯ ಆವರಣ ಚೊಕ್ಕಟವಾಗಿಡೋಕೆ ಹಣ ಬೇಕು. ಊರು ಉದ್ಧಾರಾ ಮಾಡೋಕೆ ನಮಗೆ ಟೈಮೆಲ್ಲಿ? ಇಲ್ಲಿ ಪಂಚಾಯತ ಅನ್ನೋದಿದೆ; ಹೆಸ್ರಿಗಷ್ಟೆ. ಅದನ್ನೆಲ್ಲ ವಿಚಾರಿಸೋ ಕೆಲ್ಸಾ ನಮ್ದಲ್ಲ. ಊರ ಉಸಾಬರಿ ನಮಗ್ಯಾಕೆ? ನಮಗೂ ಇಲ್ಲಿಂದ ಟ್ರಾನ್ಸ್‌ಫರ್ ಆದ್ರೆ ಸಾಕಾಗಿದೆ.' ಮುಖ್ಯಾಧ್ಯಾಪಕರ ಮಾತಿನಲ್ಲಿ